# ಅನುಬಂಧ

**ಅಧ್ಯಾಯ-೩**

## ೧೯೯೧ರ ಜನಗಣತಿಯಂತೆ ಜಿಲ್ಲೆಯ ಜನಸಂಖ್ಯೆಯ ಸಂಕ್ಷಿಪ್ತ ವಿಶ್ಲೇಷಣೆ

### ೧. ಗ್ರಾಮೀಣ-ನಗರ ಪ್ರದೇಶಗಳ ಜನಸಂಖ್ಯೆ

೧೯೯೧ರ ಜನಗಣತಿಯಂತೆ ಜಿಲ್ಲೆಯ ಜನಸಂಖ್ಯೆಯಲ್ಲಿ ಶೇ. ೭೬.೩೮ ರಷ್ಟು ಗ್ರಾಮೀಣ ಪ್ರದೇಶದಲ್ಲೂ ಮತ್ತು ಶೇ. ೨೩.೬೨ ರಷ್ಟು ನಗರ ಪ್ರದೇಶದಲ್ಲೂ ವಾಸವಾಗಿದ್ದು ಇದು ರಾಜ್ಯದ (ಗ್ರಾಮೀಣ ಶೇ. ೬೯.೦೮ ಮತ್ತು ನಗರ ಶೇ. ೩೦.೯೨) ಗ್ರಾಮೀಣ ಪ್ರದೇಶದ ಶೇಕಡಾವಾರು ಜನಸಂಖ್ಯೆಗಿಂತ ಅಧಿಕವಾಗಿರುತ್ತದೆ. ಜಿಲ್ಲೆಯ ಕೆಲವು ಗ್ರಾಮೀಣ ಪ್ರದೇಶಗಳ ಜನಸಂಖ್ಯೆಯನ್ನು ಗಮನಿಸಿದರೆ, ಚಿಂಚೋಳಿ ತಾಲೂಕಿನಲ್ಲಿ ಶೇ. ೯೦ಕ್ಕೂ ಹೆಚ್ಚಿದ್ದು (ಶೇ. ೯೪.೪೦); ಆಳಂದ (ಶೇ. ೮೯.೮೨); ಶಹಾಪುರ (ಶೇ. ೮೬.೭೭) ಮತ್ತು ಸುರಪುರ ತಾಲೂಕು (ಶೇ. ೮೬.೨೨)ಗಳಲ್ಲಿ ಶೇ. ೮೦ ರಿಂದ ಶೇ. ೯೦ರಷ್ಟು; ಯಾದಗಿರಿ (ಶೇ. ೭೯.೦೮) ಮತ್ತು ಸೇಡಂ (ಶೇ. ೭೯.೬೧) ತಾಲೂಕುಗಳಲ್ಲಿ ಶೇ. ೭೦ರಿಂದ ಶೇ. ೮೦ ರಷ್ಟು ಹಾಗೂ ಚಿತ್ತಾಪುರ (ಶೇ. ೬೭.೫೨) ಮತ್ತು ಗುಲಬರ್ಗಾ (ಶೇ. ೪೧.೬೬) ತಾಲೂಕುಗಳಲ್ಲಿ ಶೇ. ೭೦ ಕ್ಕಿಂತ ಕಡಿಮೆಯೂ ಆಗಿದ್ದು ಗುಲಬರ್ಗಾ ತಾಲೂಕಿನಲ್ಲಿ ಅತ್ಯಂತ ಕಡಿಮೆ ಗ್ರಾಮೀಣ ಜನಸಂಖ್ಯಾ ಶೇಕಡಾಂಶವನ್ನು ಕಾಣಬಹುದಾಗಿದೆ. ಜಿಲ್ಲೆಯ ೧,೩೭೮ ಹಳ್ಳಿಗಳಲ್ಲಿ ೮೩ ಹಳ್ಳಿಗಳು ಜನವಸತಿ ರಹಿತ ಹಳ್ಳಿಗಳಾಗಿದ್ದು ಇದು ಒಟ್ಟು ಹಳ್ಳಿಗಳ ಶೇಕಡ ೬.೦೨ ರಷ್ಟಿದೆ.

ಪಟ್ಟಣ ಪ್ರದೇಶಗಳ ಜನಸಂಖ್ಯೆಯನ್ನು ಗಮನಿಸಿದರೆ ಪಟ್ಟಣ ಪ್ರದೇಶಗಳ ಒಟ್ಟಿನ ಸರಾಸರಿ ಜನಸಂಖ್ಯೆಯು ೩೨,೧೯೫ ಆಗಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆ ಕಾಲೋನಿಯಲ್ಲಿ (೧,೫೬೨) ಅತಿ ಕಡಿಮೆಯೂ, ಗುಲಬರ್ಗಾ ಪಟ್ಟಣ ಪ್ರದೇಶದಲ್ಲಿ (೩,೧೦,೯೨೦) ಅತಿ ಹೆಚ್ಚಿನ ಜನಸಂಖ್ಯೆಯನ್ನೂ ಕಾಣಬಹುದು. ಜಿಲ್ಲೆಯ ಪಟ್ಟಣ ಪ್ರದೇಶಗಳ ಒಟ್ಟಿನ ಜನಸಂಖ್ಯೆಯಲ್ಲಿ ಶೇ. ೬೫.೩೯ ರಷ್ಟು ಜನಸಂಖ್ಯೆಯು ಗುಲಬರ್ಗಾ, ಶಹಾಬಾದ್ ಮತ್ತು ಯಾದಗಿರಿ ಪಟ್ಟಣ ಪ್ರದೇಶಗಳಲ್ಲಿ ಕೇಂದ್ರಿಕೃತವಾಗಿರುವುದು. ೧೯೮೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ೧೫ ಪಟ್ಟಣ ಪ್ರದೇಶಗಳಿದ್ದವು. ಆದರೆ ೧೯೯೧ರ ಜನಗಣತಿಯಂತೆ ಪಟ್ಟಣಗಳ ಸಂಖ್ಯೆ ೧೯ಕ್ಕೆ ಹೆಚ್ಚಿರುತ್ತದೆ.

### ೨. ಜನಸಂಖ್ಯೆಯ ದಶವಾರ್ಷಿಕ ವ್ಯತ್ಯಾಸ

ಜಿಲ್ಲೆಯಲ್ಲಿ ೧೯೮೧ರ ಜನಸಂಖ್ಯೆಗಿಂತ ೧೯೯೧ರ ಜನಸಂಖ್ಯೆಯು ೫,೦೧,೫೨೬ ಹೆಚ್ಚಾಗಿದ್ದು ಇದರ ಶೇಕಡಾವಾರು ಬೆಳವಣಿಗೆಯು ೨೪.೧೦ರಷ್ಟಾಗಿದ್ದು ಇದು ರಾಜ್ಯದ ಶೇಕಡಾವಾರು ಬೆಳವಣಿಗೆಗಿಂತ (ಶೇ. ೨೧.೧೨) ಅಧಿಕವಾಗಿರುತ್ತದೆ. ಈ ಹೆಚ್ಚಳವು ಗ್ರಾಮೀಣ ಪ್ರದೇಶದಲ್ಲಿ ಶೇ. ೨೨.೯೦ ಆಗಿದ್ದರೆ ನಗರ ಪ್ರದೇಶದಲ್ಲಿ ಶೇ. ೨೮.೧೮ ಆಗಿರುತ್ತದೆ.

**ಜನಸಾಂದ್ರತೆ** : ೧೯೯೧ರ ಜನಗಣತಿಯಂತೆ ಜಿಲ್ಲೆಯ ಜನಸಾಂದ್ರತೆಯು ೧೫೯ ಆಗಿದ್ದು ಇದು ರಾಜ್ಯದ ಜನಸಾಂದ್ರತೆಗಿಂತ (೨೩೫) ಕಡಿಮೆಯಾಗಿರುತ್ತದೆ. ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶದ ಜನಸಾಂದ್ರತೆಯು ೧೨೩. ಆದರೆ ನಗರ ಪ್ರದೇಶಗಳ ಜನಸಾಂದ್ರತೆಯು ೩,೨೩೦ ಆಗಿದ್ದು ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನಸಾಂದ್ರತೆಗಿಂತ (ಕ್ರಮವಾಗಿ ೧೬೬ ಹಾಗೂ ೩,೨೫೭) ಕಡಿಮೆಯಾಗಿರುತ್ತದೆ. ಜಿಲ್ಲೆಯ ಆಳಂದ ತಾಲೂಕಿನಲ್ಲಿ ಅತಿ ಹೆಚ್ಚಿನ ಗ್ರಾಮೀಣ ಜನಸಾಂದ್ರತೆಯೂ (೧೩೬) ಮತ್ತು ಅಫಜಲ್‌ಪುರ ತಾಲೂಕಿನಲ್ಲಿ ಅತಿ ಕಡಿಮೆ ಗ್ರಾಮೀಣ ಜನಸಾಂದ್ರತೆಯೂ (೧೧೬) ಕಂಡು ಬಂದರೆ ಗುಲಬರ್ಗಾ ನಗರದಲ್ಲಿ ಅತಿಹೆಚ್ಚಿನ ಜನಸಾಂದ್ರತೆಯೂ (೯,೪೬೨) ಭೀಮರಾಯನಗುಡಿ ಅಧಿಸೂಚಿತ ಪ್ರದೇಶದಲ್ಲಿ ಅತಿ ಕಡಿಮೆ ನಗರ ಜನಸಾಂದ್ರತೆಯೂ (೨೯೪) ಕಂಡು ಬರುತ್ತದೆ.

### ಸ್ತ್ರೀ-ಪುರುಷರ ಪ್ರಮಾಣ

೧೯೯೧ರ ಜನಗಣತಿಯಂತೆ ಜಿಲ್ಲೆಯಲ್ಲಿನ ಸ್ತ್ರೀ-ಪುರುಷರ ಪ್ರಮಾಣವು ೯೬೨ ಆಗಿದ್ದು ಇದು ರಾಜ್ಯದ ಸ್ತ್ರೀ-ಪುರುಷರ ಪ್ರಮಾಣಕ್ಕಿಂತ (೯೬೦) ತುಸು ಹೆಚ್ಚಾಗಿರುತ್ತದೆ. ಗ್ರಾಮೀಣ ಪ್ರದೇಶದ ಸ್ತ್ರೀ-ಪುರುಷರ ಪ್ರಮಾಣವು ೯೭೪ ಹಾಗೂ ನಗರ ಪ್ರದೇಶಗಳ ಸ್ತ್ರೀ-ಪುರುಷರ ಪ್ರಮಾಣವು ೯೨೫ ಆಗಿದ್ದರೆ ಇದು ರಾಜ್ಯದಲ್ಲಿ ಕ್ರಮವಾಗಿ ೯೭೩ ಮತ್ತು ೯೩೦ ಆಗಿರುತ್ತದೆ.

ಗ್ರಾಮೀಣ ಪ್ರದೇಶದ ಸ್ತ್ರೀ-ಪುರುಷರ ಪ್ರಮಾಣವು ಸೇಡಂ ತಾಲೂಕಿನಲ್ಲಿ (೧೦೦೦) ಅತಿ ಹೆಚ್ಚಾಗಿಯೂ ಮತ್ತು ಆಳಂದ ತಾಲೂಕಿನಲ್ಲಿ ಅತಿ ಕಡಿಮೆಯೂ (೯೪೬) ಇದ್ದು ನಗರ ಪ್ರದೇಶಗಳಲ್ಲಿ ಗುರುಮಠಕಲ್‌ನಲ್ಲಿ ಅತಿ ಹೆಚ್ಚಾಗಿಯೂ (೯೯೩) ಹಾಗೂ ಆದಿತ್ಯ ನಗರದಲ್ಲಿ ಅತಿ ಕಡಿಮೆಯೂ (೭೧೬) ಆಗಿದೆ.

**ಸಾಕ್ಷರತೆ**

೧೯೯೧ರ ಜನಗಣತಿಯಂತೆ ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶಗಳ ಸಾಕ್ಷರತೆಯು ಶೇಕಡ ೩೦.೩೬ ಆಗಿದ್ದು (ಪುರುಷರಲ್ಲಿ ಶೇ. ೪೪.೩೨ ಮತ್ತು ಸ್ತ್ರೀಯರಲ್ಲಿ ಶೇ. ೧೬.೦೫) ನಗರ ಪ್ರದೇಶಗಳ ಸಾಕ್ಷರತೆಯು ಶೇ. ೬೪.೩೬ (ಪುರುಷರಲ್ಲಿ ಶೇ. ೭೫.೮೬ ಮತ್ತು ಸ್ತ್ರೀಯರಲ್ಲಿ ಶೇ. ೫೧.೮೭) ಆಗಿರುತ್ತದೆ.

**ಏಕದಂಡಗಿ ಮಠ, ಯಾದಗಿರಿ**

ಈ ಮಠವು ವಿಶ್ವಕರ್ಮ ಸಮಾಜಕ್ಕೆ ಸೇರಿದ್ದು ಕರಿಲಿಂಗಣ್ಣಾಚಾರ್ಯರು ಇದರ ಮೂಲ ಪೀಠಾಧಿಗಳಾಗಿರುತ್ತಾರೆ. ಸಕಲ ಜನರಿಗೆ ಜ್ಞಾನ, ಭಕ್ತಿ ಮತ್ತು ವೈರಾಗ್ಯವನ್ನು ಬೋಧಿಸುವುದು ಇದರ ಪ್ರಮುಖ ಉದ್ದೇಶವಾಗಿದೆ. ಈ ಮಠವು ಒಂದು ಸ್ವತಂತ್ರ ಮಠವಾಗಿದ್ದು, ಜಿಲ್ಲೆಯ ಶಹಾಪುರ, ಸುಲೇಪೇಟೆ, ಗುಲಬರ್ಗಾ ಹಾಗೂ ಅದರ ಸಮೀಪವಿರುವ ಫಿರೋಜಾಬಾದಗಳಲ್ಲಿ ಇದರ ಶಾಖಾ ಮಠಗಳಿವೆ. ಜಿಲ್ಲೆಯ ಕುರಕುಂಟಾ, ಸೇಡಂ, ಶಹಾಬಾದ್ ಮತ್ತು ಗುಲಬರ್ಗಾಗಳಲ್ಲಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾ ಪ್ರಸಾರ ಕೇಂದ್ರಗಳನ್ನು ನಡೆಸುತ್ತಿದೆ. ಪ್ರಸ್ತುತ ಪೀಠಾಧಿಪತಿಗಳಾದ ಶ್ರೀ ಗುರುನಾಥ ಮಹಾಸ್ವಾಮಿಗಳು, ಧರ್ಮ ಕಾರ್ಯ ಪ್ರಸರಣ ಹಾಗೂ ಶೈಕ್ಷಣಿಕ ಕಾರ್ಯ ನಿರ್ವಹಣೆ ಮಾಡುತ್ತಿದ್ದು ಹಲವಾರು ಧಾರ್ಮಿಕ ಪುಸ್ತಕಗಳನ್ನು ರಚಿಸಿರುತ್ತಾರೆ. ಮಾರ್ಗಶಿರ ಶುದ್ಧ ಷಷ್ಠಿಯಂದು ಗುರುನಾಥ ಸ್ವಾಮಿಗಳ ಆರಾಧನೆ ನಡೆಯುತ್ತದೆ.

ಉತ್ಸವ : ಸೇಡಂ ತಾಲೂಕಿನ ಯಾನಾಗುಂದಿಯಲ್ಲಿರುವ ಮಾಣಿಕ್ಯೇಶ್ವರಿ ಆಶ್ರಮದಲ್ಲಿ ಶಿವರಾತ್ರಿಯಂದು ವಿಶೇಷ ಉತ್ಸವವು ಜರಗುತ್ತದೆ.

**ಶ್ರೀರಾಮಚಂದ್ರ ಮಿಷನ್ ಯೋಗಾಶ್ರಮ**

ಉತ್ತರ ಪ್ರದೇಶದ ಶಹಜಹಾನ್‌ಪುರದಲ್ಲಿರುವ ಶ್ರೀ ರಾಮಚಂದ್ರ ಮಿಷನ್ ಸಂಸ್ಥೆಯ ಅಧೀನತೆಯಲ್ಲಿ ಗುಲಬರ್ಗಾದಲ್ಲಿ ಶ್ರೀ ರಾಮಚಂದ್ರ ಮಿಷನ್ ಯೋಗಾಶ್ರಮವು 1957ರಿಂದ ಕಾರ್ಯನಿರ್ವಹಿಸುತ್ತಿದ್ದು ಧ್ಯಾನದ ಮೂಲಕ ಆಧ್ಯಾತ್ಮಿಕ ಶಿಕ್ಷಣವನ್ನು ನೀಡುವುದೂ ಹಾಗೂ ಮೌಲ್ಯಾಧಾರಿತ ಮತ್ತು ಆಧ್ಯಾತ್ಮಿಕ ಶಿಕ್ಷಣದ ಪಠ್ಯ ಕ್ರಮವನ್ನು ವಿದ್ಯಾಸಂಸ್ಥೆಗಳಲ್ಲಿ ಅಳವಡಿಸಲು ಸಲಹೆ ನೀಡುವುದೂ ಇದರ ಪ್ರಮುಖ ಉದ್ದೇಶವಾಗಿದೆ. ಶ್ರೀರಾಮಚಂದ್ರ ಮಿಷನ್ ಒಂದು ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆಯಾಗಿದ್ದು ಇದರ ಆಶ್ರಯದಲ್ಲಿ ದೇಶ ವಿದೇಶಗಳಲ್ಲಿ ಹಲವಾರು ಪ್ರಶಿಕ್ಷಣ ಕೇಂದ್ರಗಳೂ ಮತ್ತು ಯೋಗಾಶ್ರಮಗಳೂ ಕಾರ್ಯನಿರ್ವಹಿಸುತ್ತಿವೆ.

**ಅಧ್ಯಾಯ-೪**

**ಪುಟ ೨೦೩ಕ್ಕೆ ಸೇರಿಸಿ**

**ಕೃಷಿ ಸಂಶೋಧನಾ ಕೇಂದ್ರ, ಗುಲಬರ್ಗಾ** : ಕೃಷಿ ಸಂಶೋಧನಾ ಕೇಂದ್ರವು ಗುಲಬರ್ಗಾದಲ್ಲಿ ೧೯೭೪ರಲ್ಲಿ ಸ್ಥಾಪನೆಯಾಯಿತು. ೧೯೭೪ ರಿಂದ ೧೯೮೪ರ ವರೆಗೂ ರೈತರ ಹೊಲಗಳಲ್ಲಿ ದ್ವಿದಳ ಧಾನ್ಯಗಳ ಬಗ್ಗೆ ಸಂಶೋಧನೆ ಕೈಗೊಳ್ಳಲಾಗಿತ್ತು. ೧೯೮೪ರಲ್ಲಿ ತನ್ನದೇ ಆದ ೧೩೪ ಎಕರೆ ಜಮೀನನ್ನು ಪಡೆದು ಸಂಶೋಧನೆಯನ್ನು ಮುಂದುವರೆಸಲಾಗಿದೆ. ೧೯೮೬ರಲ್ಲಿ ಸಂಶೋಧನಾ ಕೇಂದ್ರದಲ್ಲಿ ಪ್ರತ್ಯೇಕ ಕಟ್ಟಡವನ್ನು ನಿರ್ಮಿಸಲಾಗಿದೆ. ಸಂಶೋಧನೆಯ ಜೊತೆಗೆ ಮೂಲ ಬೀಜಗಳ ಉತ್ಪಾದನೆ, ರೈತರ ಸಮಸ್ಯೆಗಳಿಗೆ ಪರಿಹಾರ ಹಾಗೂ ರೈತರ ಹೊಲಗಳಿಗೆ ಭೇಟಿ ಮತ್ತು ಕೃಷಿ ವಿಸ್ತರಣಾ ಸಿಬ್ಬಂದಿಯವರಿಗೆ ತರಬೇತಿ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ.

ಈ ಸಂಶೋಧನಾ ಕೇಂದ್ರವು ಗುಲಬರ್ಗಾ ಜಿಲ್ಲೆಗೆ ಶಿಫಾರಸ್ಸು ಮಾಡಿರುವ ವಿವಿಧ ತಳಿಗಳು ಹಾಗೂ ಅವುಗಳ ಅವಧಿ (ದಿವಸಗಳಲ್ಲಿ) ಮತ್ತು ಹೆಕ್ಟೇರಿಗೆ ಪಡೆಯಬಹುದಾದ ಇಳುವರಿ (ಕೆ.ಜಿ.ಗಳಲ್ಲಿ) ವಿವರ ಕೆಳಕಂಡಂತಿದೆ.

**ತೊಗರಿ**

| | | | |
|---|---|---|---|
| ೧. | ಜಿ. ಎಸ್. ೧ | ೧೮೦ ದಿವಸಗಳು | ೧,೦೦೦ ದಿಂದ ೧,೨೦೦ |
| ೨. | ಪಿ. ಟಿ. ೨೨೧ | ೧೬೦ ದಿವಸಗಳು | ೧,೦೦೦ ದಿಂದ ೧,೨೦೦ |
| ೩. | ಆಯ್.ಸಿ.ಪಿ. ೮೮೬೩ (ಮಾರುತಿ) | ೧೮೦ ದಿವಸಗಳು | ೯೦೦ ದಿಂದ ೧,೧೦೦ |

**ಕಡಲೆ**

| | | | |
|---|---|---|---|
| ೧. | ಅಣ್ಣಿಗೇರಿ-೧ | ೯೫ ದಿವಸಗಳು | ೮೦೦ ರಿಂದ ೯೦೦ |
| ೨. | ಭೀಮಾ ೨೩೭೫ | ೯೦ ದಿವಸಗಳು | ೯೦೦ ರಿಂದ ೧,೧೦೦ |
| ೩. | ಚಾಫಾ | ೯೫ ದಿವಸಗಳು | ೭೦೦ ರಿಂದ ೮೦೦ |

**ಹೆಸರು**

| | | | |
|---|---|---|---|
| ೧. | ಪಿ. ಎಸ್. ೧೬ | ೬೦ ರಿಂದ ೬೫ ದಿವಸಗಳು | ೬೦೦ ರಿಂದ ೭೦೦ |
| ೨. | ಪೂಸಾ ಬೈಸಾಕಿ | ೬೦ ರಿಂದ ೬೫ ದಿವಸಗಳು | ೬೦೦ ರಿಂದ ೭೦೦ |

**ಉದ್ದು**

| | | | |
|---|---|---|---|
| ೧. | ಟಿ. ೯ | ೭೫ ರಿಂದ ೮೦ ದಿವಸಗಳು | ೬೦೦ ರಿಂದ ೭೦೦ |
| ೨. | ಕೆ. ೩ | ೯೦ ರಿಂದ ೧೦೦ ದಿವಸಗಳು | ೮೦೦ ರಿಂದ ೯೦೦ |

**ಅಲಸಂದಿ**

| | | | |
|---|---|---|---|
| ೧. | ಸಿ.೧೫೨ | ೮೫ ರಿಂದ ೯೫ ದಿವಸಗಳು | ೯೦೦ ರಿಂದ ೧,೦೦೦ |

ಈ ಸಂಶೋಧನಾ ಕೇಂದ್ರದಲ್ಲಿ ತೃಣಧಾನ್ಯ ಬೆಳೆಗಳು ಹಾಗೂ ಹಿಂಗಾರಿ ಜೋಳದ ಅಭಿವೃದ್ಧಿ ಬಗ್ಗೆ ಸಂಶೋಧನೆ ನಡೆಸಲಾಗುತ್ತಿದೆ. ರಾಷ್ಟ್ರೀಯ ಬೇಳೆಕಾಳು ಅಭಿವೃದ್ಧಿ ಯೋಜನೆಯ ಅನುಸಾರ ೧೯೯೨-೯೩ನೆಯ ವರ್ಷದಲ್ಲಿ ಹಿಂಗಾರು ಹಂಗಾಮಿನಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಕಡಲೆ ಬೆಳೆಯ ಸುಧಾರಿತ ಬೇಸಾಯ ಪದ್ಧತಿಯನ್ನು ರೈತರಲ್ಲಿ ಮನವರಿಕೆ ಮಾಡಿಕೊಡಲು ಕಡಲೆ ಬೆಳೆಯ ಫ್ರಂಟ್‌ಲೈನ್ ಪ್ರಾತ್ಯಕ್ಷಿಕೆಗಳನ್ನು ರೈತರ ಹೊಲಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ.

**ಪುಟ ೨೨೦ಕ್ಕೇ ಸೇರಿಸಿ**

**ಪಶುಪಾಲನೆ ಮತ್ತು ಪಶುವೈದ್ಯ ಸೇವೆ**

ಮೂಲತಃ ಬೇಸಾಯಗಾರರಾದ ಜಿಲ್ಲೆಯ ಜನತೆಯ ಸಾಮಾಜಿಕ ಮತ್ತು ಆರ್ಥಿಕ ರಂಗದಲ್ಲಿ ಜಾನುವಾರುಗಳ ಸಾಕಾಣಿಕೆಯು ಒಂದು ಮಹತ್ವದ ಪಾತ್ರ ವಹಿಸುತ್ತಿದೆ. ಜಿಲ್ಲೆಯಲ್ಲಿ ಇರುವ ಜಾನುವಾರುಗಳ ಆರೋಗ್ಯ ರಕ್ಷಣೆಯು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಪ್ರಮುಖ ಕರ್ತವ್ಯವಾಗಿದೆ. ಜೊತೆಗೆ ಜಾನುವಾರುಗಳನ್ನು ಆಧುನಿಕ ಪಶುಪಾಲನಾ ತಂತ್ರಜ್ಞಾನದ ವಿಧಾನಗಳಿಂದ ಅಭಿವೃದ್ಧಿ ಪಡಿಸುವುದಲ್ಲದೆ ಅದಕ್ಕೆ ಪೂರಕವಾಗಿ ಬೇಕಾಗುವ ಪೂರ್ವಭಾವಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಹೊಣೆಯು ಇಲಾಖೆಯದಾಗಿದೆ. ಗುಲಬರ್ಗಾದಲ್ಲಿರುವ ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರದಲ್ಲಿ ೧೯೯೨-೯೩ನೇ ಸಾಲಿನಲ್ಲಿ ೮೯ ಪಶುವೈದ್ಯಕೀಯ ಪರೀಕ್ಷಕರು ತರಬೇತಿ ಪಡೆದಿದ್ದಾರೆ. ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಅವಧಿ ಒಂದು ವರ್ಷದ್ದಾಗಿರುತ್ತದೆ. ಪಶುವೈದ್ಯಕೀಯ ಆಸ್ಪತ್ರೆ ಯಾದಗಿರಿ, ಈ ಕೇಂದ್ರದಲ್ಲಿ ೬೦ ಜನ ಪಶುವೈದ್ಯಕೀಯ ಪರೀಕ್ಷಕರಿಗೆ ತರಬೇತಿ ನೀಡಲಾಗಿದೆ.

ಜಾನುವಾರು ಆರೋಗ್ಯ ಮತ್ತು ಪಶುವೈದ್ಯ ಸೇವೆ, ಇಲಾಖೆಯ ಮುಖ್ಯ ಕಾರ್ಯ ಚಟುವಟಿಕೆಯಾಗಿದ್ದು ಇದರ ಮುಖ್ಯ ಉದ್ದೇಶ ಜಾನುವಾರುಗಳಲ್ಲಿ ಆಗುವ ಪ್ರಾಣ ಹಾನಿಯ ಪ್ರಮಾಣವನ್ನು ಕಡಿಮೆ ಮಾಡಲು ರೋಗಗಳ ವಿರುದ್ಧ ರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳುವುದು, ರೋಗಪೀಡಿತ ಜಾನುವಾರುಗಳನ್ನು ಚಿಕಿತ್ಸೆಗೆ ಒಳಪಡಿಸುವುದು ಹಾಗೂ ಇನ್ನಿತರ ವಿಸ್ತರಣಾ ಕಾರ್ಯಕ್ರಮಗಳನ್ನು ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಮಾಡಲಾಗುತ್ತದೆ. ರೋಗ ಪೀಡಿತ ಪ್ರಾಣಿಗಳನ್ನು ಶುಶ್ರೂಷೆ ಮಾಡುವುದರ ಜೊತೆಗೆ ಪ್ರಾಣಿಗಳಿಗೆ ತಗಲಬಹುದಾದ ಸಾಂಕ್ರಾಮಿಕ ಹಾಗೂ ಸಾಂಕ್ರಾಮಿಕವಲ್ಲದ ರೋಗಗಳು ಹರಡುವುದರ ವಿರುದ್ಧ ಕ್ರಮ ಕೈಗೊಂಡು ಪ್ರಾಣಿಗಳ ಜೀವ ಹಾನಿಯಿಂದ ರೈತರಿಗೆ ಉಂಟಾಗುವ ಆರ್ಥಿಕ ನಷ್ಟವನ್ನು ತಪ್ಪಿಸುತ್ತದೆ. ಜಿಲ್ಲೆಯಲ್ಲಿರುವ ಪಶುಸಂಪತ್ತನ್ನು ಕಾಪಾಡಿಕೊಂಡು ಅಭಿವೃದ್ಧಿಪಡಿಸಲು ಒಟ್ಟು ೨೯೮ ವಿವಿಧ ಮಾದರಿಯ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ತಾಲೂಕುವಾರು ಕಾರ್ಯನಿರ್ವಹಿಸುತ್ತಿರುವ ವಿವಿಧ ಪಶುವೈದ್ಯಕೀಯ ಸಂಸ್ಥೆಗಳ ವಿವರಗಳನ್ನು ಕೋಷ್ಟ ೪.೧೪ರಲ್ಲಿ ಕೊಟ್ಟಿದೆ. ಉಳಿದ ಪಶುಸಂಪತ್ತಿಗೆ ಸಂಬಂಧಿಸಿದ ವಿವರಗಳನ್ನು ಕೋಷ್ಟಕ ೪.೧೧ ರಿಂದ ೪.೧೩ರವರೆಗೆ ಪುಟ ೨೨೦ ರಿಂದ ೨೨೩ರಲ್ಲಿ ಕೊಟ್ಟಿದೆ.

ಜಾನುವಾರು ರೋಗ ಪರೀಕ್ಷಣಾ ಕಾರ್ಯಕ್ರಮವು ಜಾನುವಾರು ಆರೋಗ್ಯ ರಕ್ಷಣಾ ಕಾರ್ಯಚಟುವಟಿಕೆಗಳಲ್ಲಿ ಒಂದು ಮಹತ್ವದ ಚಟುವಟಿಕೆಯಾಗಿದೆ. ಇದರ ಮುಖ್ಯ ಗುರಿಯು ನಿರ್ದಿಷ್ಟ ಪ್ರದೇಶದಲ್ಲಿ ಪ್ರಾಣಿಗಳಲ್ಲಿ ಹರಡುವ ರೋಗಗಳ ಬಗ್ಗೆ ಹಾಗೂ ಅದಕ್ಕೆ ಸಂಬಂಧಿಸಿದ ಅಂಕಿ-ಅಂಶಗಳ ಸಂಗ್ರಹಣೆ, ಕ್ರೋಢೀಕರಣ ಮತ್ತು ವಿಶ್ಲೇಷಣೆ ಮಾಡುವುದು ಹಾಗೂ ಋತುಮಾನಕ್ಕನುಗುಣವಾಗಿ ಅದರಲ್ಲಾಗುವ ಬದಲಾವಣೆಗಳನ್ನು ಗುರುತಿಸುವುದಾಗಿದೆ. ಸಾಂಕ್ರಾಮಿಕ ರೋಗಗಳೆಂದು ದನಗಳಲ್ಲಿ ಗಂಟಲು ಬೇನೆ, ಚಪ್ಪೆರೋಗ, ಆಂತ್ರಾಕ್ಸ್, ದೊಡ್ಡ ರೋಗ, ಕಾಲುಬಾಯಿ ಜ್ವರ, ಕರುಳುಬೇನೆ, ಕೋಳಿಗಳಲ್ಲಿ ಕೋಳಿ ಮೈಲಿ, ಕೊಕ್ಕರೆ ರೋಗ, ಕುರಿಗಳಲ್ಲಿ ಕುರಿ ಮತ್ತು ಮೇಕೆ ಮೈಲಿ ಎಂದು ಗುರುತಿಸಲಾಗಿದೆ.

ಜಾನುವಾರು ಅಭಿವೃದ್ಧಿ ಕಾರ್ಯಕ್ರಮದಡಿ ಜಾನುವಾರುಗಳ ಗುಣಮಟ್ಟ ಹಾಗೂ ಉಪಯೋಗಿತ್ವವನ್ನು ಸುಧಾರಿಸುವ ಗುರಿ ಹೊಂದಿದೆ. ಇದನ್ನು ಸಾಧಿಸಲು ದೇಶೀಯ ತಳಿಗಳನ್ನು ವಿದೇಶೀಯ ತಳಿಗಳೊಂದಿಗೆ ಮಿಶ್ರ ಮಾಡಿ ತನ್ಮೂಲಕ ದೇಶೀಯ ತಳಿಗಳಲ್ಲಿ ಆಮೂಲಾಗ್ರ ಬದಲಾವಣೆಯನ್ನು ಮಾಡಿ ಉತ್ತಮ ವಂಶಾವಳಿ ದನಗಳನ್ನು ಅಭಿವೃದ್ಧಿಪಡಿಸಲು ಕಾರ್ಯಕ್ರಮ ರೂಪಿಸಲಾಗಿದೆ. ಉತ್ತಮ ತಳಿಗಳಿಗೆ ಹೆಸರಾದ ಜೆರ್ಸಿ, ಎಚ್.ಎಫ್ ಹಾಗೂ ಇನ್ನಿತರ ಹೋರಿಗಳಿಂದ ಸ್ಥಳೀಯ ತಳಿಗಳಿಗೆ ಮಿಶ್ರ ಮಾಡಿ ಇಲ್ಲಿನ ತಳಿಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ತೀವ್ರ ತಳಿ ಅಭಿವೃದ್ಧಿ ಕಾರ್ಯಕ್ರಮದಡಿ ಬರಗಾಲದಲ್ಲಿಯೂ ಜೀವಿಸಬಲ್ಲಂತಹ ತಳಿಗಳ ವೀರ್ಯವನ್ನು ಉಪಯೋಗಿಸಿ ಬರಗಾಲದಲ್ಲಿಯೂ ಜೀವಿಸುವಂಥ ಸಾಮರ್ಥ್ಯವುಳ್ಳ ತಳಿಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಪಶುಸಂಗೋಪನಾ ಇಲಾಖೆಯ ಅಧೀನದಲ್ಲಿ ಸ್ಥಾಪಿತಗೊಂಡು ಕಾರ್ಯ ನಿರ್ವಹಿಸುತ್ತಿರುವ ಜಾನುವಾರು ಕ್ಷೇತ್ರಗಳು ಅಗತ್ಯವಿರುವ ಹೋರಿಗಳನ್ನು ಮತ್ತು ಮೇವಿನ ಬೀಜಗಳನ್ನು ಉತ್ಪಾದಿಸುವಲ್ಲಿ ಹಾಗೂ ರೈತರಿಗೆ ವಿಸ್ತರಣಾ ತರಬೇತಿಯನ್ನು ನೀಡುವಲ್ಲಿ ಕಾರ್ಯಮಗ್ನವಾಗಿವೆ.

**ಕುಕ್ಕುಟ ಅಭಿವೃದ್ಧಿ** : ಕುಕ್ಕುಟ ಅಭಿವೃದ್ಧಿಯು ಮಹತ್ವದ ಕಾರ್ಯ ಚಟುವಟಿಕೆಯಾಗಿದೆ. ವೈಜ್ಞಾನಿಕವಾಗಿ ಕೋಳಿ ಸಾಕಾಣಿಕೆ ಮಾಡಿ ಉತ್ತಮವಾದ ಹೆಚ್ಚಿನ ಗುಣಮಟ್ಟದ ಕೋಳಿಗಳ ಹಾಗೂ ಹೆಚ್ಚಿನ ಮೊಟ್ಟೆಗಳ ಉತ್ಪತ್ತಿ ಮಾಡುವುದು ಹಾಗೂ ಕುಕ್ಕುಟ ಸಾಕಾಣಿಕೆದಾರರಿಗೆ, ರೈತರಿಗೆ ಹಾಗೂ ಹೊಸತಾಗಿ ಕೋಳಿ ಸಾಕಣೆ ಮಾಡುವವರಿಗೆ ಕೋಳಿ ಸಾಕಾಣಿಕೆ ಬಗ್ಗೆ ಸಂಪೂರ್ಣ ಮಾಹಿತಿ, ಪಾಲನೆ ಪೋಷಣೆ ಬಗ್ಗೆ ಮಾಹಿತಿ ಹಾಗೂ ಮಾರ್ಗದರ್ಶನ ನೀಡುವುದು, ಕುಕ್ಕುಟ ಅಭಿವೃದ್ಧಿಯಡಿ ಕೈಗೊಳ್ಳುವ ಪ್ರಮುಖ ಚಟುವಟಿಕೆಗಳಾಗಿವೆ. ಗುಲಬರ್ಗಾದಲ್ಲಿರುವ ತ್ವರಿತ ಕೋಳಿ ಹಾಗೂ ಮೊಟ್ಟೆ ಅಭಿವೃದ್ಧಿ ಕೇಂದ್ರವು ರೈತರಿಗೆ ಕೋಳಿ ಸಾಕಾಣಿಕೆಯನ್ನು ತರಬೇತಿ, ಕೋಳಿ ಮರಿಗಳ ವಿತರಣೆ, ಖಾಯಿಲೆ ಪರೀಕ್ಷೆ, ಮಾರ್ಗದರ್ಶನ ಹಾಗೂ ಮಾರಾಟ ವ್ಯವಸ್ಥೆಯನ್ನು ಸಹಕಾರ ಸಂಘದ ವತಿಯಿಂದ ಮಾಡಲಾಗುತ್ತದೆ.

**ಪುಟ ೨೨೦ಕ್ಕೆ ಸೇರಿಸಿ**

**ಗುಲಬರ್ಗಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಗುಲಬರ್ಗಾ** : ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿಯ ಘಟಕವು ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ತನ್ನ ಕಾರ್ಯಾಚರಣೆಯನ್ನು ೧೯೮೪ರಲ್ಲಿ

ಪ್ರಾರಂಭಿಸಿತು. ೧೯೯೬-೯೭ನೇ ಸಾಲಿನ ಮಾರ್ಚ್ ಅಂತ್ಯದವರೆಗೆ ಒಟ್ಟು ಬಂಡವಾಳ ರೂ. ೨೩.೧೫ ಲಕ್ಷ ಸಂಗ್ರಹಣೆಯಾಗಿರುತ್ತದೆ. ಅಮುಲ್ ಮಾದರಿಯ ೩೭೧ ಸಂಘಗಳು ಒಕ್ಕೂಟದಲ್ಲಿ ಸದಸ್ಯತ್ವ ಪಡೆದಿವೆ. ಈಗ ಕಾರ್ಯಾಚರಣೆಯಲ್ಲಿರುವ ೨೨೪ ಸಹಕಾರ ಸಂಘಗಳ ಪೈಕಿ ೬೮ ಸಂಘಗಳು ಗುಲಬರ್ಗಾ ಜಿಲ್ಲೆಯಲ್ಲಿವೆ. ಒಕ್ಕೂಟದಲ್ಲಿ ಒಟ್ಟು ೨೨ ಹಾಲು ಶೇಖರಣೆ ಮಾರ್ಗಗಳಿದ್ದು ಪ್ರತಿದಿನ ಸರಾಸರಿ ೧೮,೫೦೦ ಕೆ. ಜಿ. ಹಾಲು ಶೇಖರಣೆಯಾಗುತ್ತದೆ. ಗುಲಬರ್ಗಾ ಜಿಲ್ಲೆಯಲ್ಲಿ ಒಟ್ಟು ೧೪೪ ನೋಂದಾಯಿಸಿದ ಸಂಘಗಳಿವೆ. ಸಂಘಗಳ ಸದಸ್ಯತ್ವ ಪಡೆದವರಲ್ಲಿ ೬,೯೧೬ ಸಣ್ಣ ರೈತರು, ೪,೮೬೩ ಅತೀ ಸಣ್ಣ ರೈತರು, ೪೭೫೨ ಕೃಷಿ ಕಾರ್ಮಿಕರು ಹಾಗೂ ೫,೬೪೨ ಇತರೆ ವರ್ಗದವರಿದ್ದಾರೆ. ಪ್ರತಿದಿನ ಸರಾಸರಿ ೪,೧೧೬ ಕೆ. ಜಿ ಹಾಲು ಶೇಖರಣೆಯಾಗುತ್ತಿದ್ದು ೨೨,೫೦೦ ಕೆ. ಜಿ. ಹಾಲು ಮಾರಾಟವಾಗುತ್ತದೆ. ಜಿಲ್ಲೆಯಲ್ಲಿ ಕಾರ್ಯಾಚರಣೆಯಲ್ಲಿರುವ ೧೦ ಹಾಲಿನ ಮಾರ್ಗಗಳಿದ್ದು, ೧೨ ಕೃತಕ ಗರ್ಭಧಾರಣಾ ಕೇಂದ್ರಗಳಿವೆ.

ಗುಲಬರ್ಗಾ ಡೇರಿಯು ಈಗ ದಿನಂಪ್ರತಿ ೩೦,೦೦೦ ಲೀಟರ್ ಹಾಲನ್ನು ಸಂಸ್ಕರಿಸಿ ಮಾರುಕಟ್ಟೆ ಮಾಡುವ ಸಾಮರ್ಥ್ಯ ಹೊಂದಿರುತ್ತದೆ. ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ ಜೊತಗೂಡಿ ಗುಲಬರ್ಗಾ ಡೇರಿಯ ಸಾಮರ್ಥ್ಯವನ್ನು ದಿನಂಪ್ರತಿ ಈಗಿರುವ ೩೦,೦೦೦ ಲೀಟರುಗಳಿಂದ ೬೦,೦೦೦ ಲೀಟರ್‌ಗಳಿಗೆ ಹೆಚ್ಚಿಸಲು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಕ್ಷೀರಧಾರಿ ಯೋಜನೆಯಲ್ಲಿ ಭರಿಸಲಾಗುತ್ತದೆ. ಡೇರಿಯ ವಿಸ್ತರಣಾ ಕಾರ್ಯ ಈಗ ಪ್ರಗತಿಯಲ್ಲಿದ್ದು ಕಟ್ಟಡದ ನಿರ್ಮಾಣ ಕಾರ್ಯ ಮುಗಿದಿರುತ್ತದೆ. ಗುಲಬರ್ಗಾ ಹಾಲು ಒಕ್ಕೂಟವು ಗುಲಬರ್ಗಾ ಹಾಗೂ ಬೀದರ್ ಜಿಲ್ಲೆಗಳ ಎಲ್ಲಾ ತಾಲೂಕು ಹಾಗೂ ಪ್ರಮುಖ ಪಟ್ಟಣಗಳಿಗೆ ಪಾಶ್ಚೀಕರಿಸಿದ ಹಾಲನ್ನು ಗ್ರಾಹಕರಿಗೆ ಸರಬರಾಜು ಮಾಡುತ್ತಿದೆ.

**ಶಹಾಪುರ ಶಿಥಿಲೀಕರಣ ಕೇಂದ್ರ** : ಶಹಾಪುರ - ಯಾದಗಿರಿ ರಸ್ತೆಯಲ್ಲಿ ಶಹಾಪುರದಿಂದ ಐದು ಕಿ. ಮೀ. ದೂರದಲ್ಲಿ ಇರುವ ಗುಲಬರ್ಗಾ ಹಾಲು ಒಕ್ಕೂಟಕ್ಕೆ ಸೇರಿದ ಮೇವು ಬೀಜ ಉತ್ಪಾದನೆ ಮತ್ತು ಪ್ರಾತ್ಯಕ್ಷಿಕೆ ಕೇಂದ್ರದ ಆವರಣದಲ್ಲಿ ದಿನಂಪ್ರತಿ ೧೦,೦೦೦ ಲೀಟರ್ ಸಾಮರ್ಥ್ಯವುಳ್ಳ ಹಾಲು ಶಿಥಿಲೀಕರಣ ಕೇಂದ್ರವನ್ನು ೫೦ ಲಕ್ಷ ರೂ. ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ. ಈ ಕೇಂದ್ರದ ಸಿವಿಲ್ ಕಾಮಗಾರಿಗಳಿಗೆ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯಿಂದ ಹಾಗೂ ಯಂತ್ರೋಪಕರಣಗಳಿಗೆ ಗುಲಬರ್ಗಾ ಜಿಲ್ಲಾ ಪಂಚಾಯತ್‌ನಿಂದ ಆರ್ಥಿಕ ಸಹಾಯ ಪಡೆಯಲಾಗಿದೆ.

**ಪುಟ ೨೨೩ಕ್ಕೆ ಸೇರಿಸಿ**

## ಮೀನುಗಾರಿಕೆ

ಗುಲಬರ್ಗಾ ಜಿಲ್ಲೆಯಲ್ಲಿ ೬,೫೯೯ ಹೆಕ್ಟೇರ್ ವಿಸ್ತೀರ್ಣವುಳ್ಳ ೧೦೪ ದೊಡ್ಡ ಕೆರೆಗಳನ್ನು, ೭೯ ಹೆಕ್ಟೇರ್ ವಿಸ್ತೀರ್ಣವುಳ್ಳ ೧೦ ಸಣ್ಣ ಕೆರೆಗಳನ್ನು ಹಾಗೂ ೪೫೧ ಹೆಕ್ಟೇರ್ ವಿಸ್ತೀರ್ಣವುಳ್ಳ (ಹತ್ತಿಕುಣಿ ೧೨೦ ಹೆಕ್ಟೇರ್ ಮತ್ತು ಚಂದ್ರಂಪಳ್ಳಿ ೩೩೧ ಹೆಕ್ಟೇರು) ಜಲಾಶಯಗಳನ್ನೊಳಗೊಂಡು ಒಟ್ಟು ೭,೧೨೯ ಹೆಕ್ಟೇರ್‌ನಷ್ಟು ಒಳನಾಡು ಜಲಸಂಪನ್ಮೂಲಗಳನ್ನು ಹೊಂದಿದೆ. ೧೯೯೦-೯೧ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ೧,೮೩೦ ಮೆಟ್ರಿಕ್ ಟನ್ನುಗಳಷ್ಟು ಮೀನು ಉತ್ಪಾದನೆಯಾಗಿದ್ದು ೧೯೯೦-೯೧ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ೧,೪೫೦ ಮೆಟ್ರಿಕ್ ಟನ್ನುಗಳಷ್ಟು ಮೀನು ಉತ್ಪಾದನೆ ಮಾಡಲಾಗಿದೆ. ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯಡಿ ಹತ್ತಿಕುಣಿ ಮೀನುಗಾರಿಕಾ ಕ್ಷೇತ್ರದಲ್ಲಿ ೦.೭೦ ಹೆಕ್ಟೇರು ವಿಸ್ತೀರ್ಣದ ಹಾಗೂ ಚಂದ್ರಂಪಳ್ಳಿ ಮೀನುಗಾರಿಕಾ ಕ್ಷೇತ್ರದಲ್ಲಿ ೦.೮೦ ಹೆಕ್ಟೇರು ವಿಸ್ತೀರ್ಣದ ಕೊಳಗಳಿದ್ದು ಇವುಗಳಲ್ಲಿ ಮೀನು ಮರಿ ಉತ್ಪಾದನಾ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಖಾಸಗಿ ವಲಯದಲ್ಲಿ ಮೀನು ಮರಿ ಉತ್ಪಾದನೆಗೆ ಉತ್ತೇಜನವನ್ನು ನೀಡಲು ೧೯೯೦-೯೧ನೇ ಸಾಲಿನಿಂದ ಮೀನು ಮರಿ ಉತ್ಪಾದನೆಗಾಗಿ ಖಾಸಗಿಯವರಿಗೆ ಸಹಾಯಧನ ಯೋಜನೆಯನ್ನು ಜಾರಿಗೆ ತರಲಾಗಿದೆ. ಜಿಲ್ಲೆಯಲ್ಲಿ ಮೂರು ಮಂಜುಗಡ್ಡೆ ಉತ್ಪಾದಿಸುವ ಕಾರ್ಖಾನೆಗಳಿವೆ. ಜಿಲ್ಲೆಯಲ್ಲಿ ಒಟ್ಟು ೨,೭೭೮ ಸಕ್ರಿಯ ಮೀನುಗಾರರಿದ್ದು ಮೀನುಗಾರರ ರಾಷ್ಟ್ರೀಯ ಕ್ಷೇಮಾಭಿವೃದ್ಧಿ ನಿಧಿಯಡಿಯಲ್ಲಿ ಆನೆಸುಗೂರು ಗ್ರಾಮದಲ್ಲಿ ಮೀನುಗಾರರಿಗೆ ಮನೆಗಳನ್ನು ಹಾಗೂ ಸಮುದಾಯ ಭವನಗಳನ್ನು ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿದೆ.

## ಅಧ್ಯಾಯ-೬

### ಜೀವ ವಿಮೆ

ಭಾರತೀಯ ಜೀವ ವಿಮಾ ನಿಗಮವು ಗುಲಬರ್ಗಾ ಜಿಲ್ಲೆಯ ಗುಲಬರ್ಗಾದಲ್ಲಿ ಮೂರು ಶಾಖೆಗಳಲ್ಲದೇ ಯಾದಗಿರಿ ಮತ್ತು ಶಹಾಪುರಗಳಲ್ಲಿ ಒಂದೊಂದು ಶಾಖೆಯನ್ನು ಸ್ಥಾಪಿಸಿದೆ. ಮಾರ್ಚ್ ೧೯೯೬ರ ಅಂತ್ಯದಲ್ಲಿ ಜಿಲ್ಲೆಯಾದ್ಯಂತ ೩೭ ಅಭಿವೃದ್ಧಿ ಅಧಿಕಾರಿಗಳಲ್ಲದೇ ೧,೨೭೧ ವಿಮಾ ಏಜೆಂಟರು ಕಾರ್ಯನಿರ್ವಹಿಸುತ್ತಿದ್ದರು. ಈ ಅವಧಿಯಲ್ಲಿ ಸುಮಾರು ೧೩೬ ಕೋಟಿ ರೂ. ಮೊತ್ತದ ೨೯,೬೪೩ ವಿಮಾ ಪಾಲಿಸಿಗಳು ಚಾಲ್ತಿಯಲ್ಲಿದ್ದವು. ೧೯೯೩-೯೪ ಮತ್ತು ೧೯೯೧-೯೨ರಲ್ಲಿ ಕ್ರಮವಾಗಿ ೧೦೭.೦೯ ಕೋಟಿ ರೂ. ಹಾಗೂ ೬೩.೩೯ ಕೋಟಿ ರೂ. ಮೊತ್ತದ ಒಟ್ಟು ೨೭,೪೯ ಹಾಗೂ ೧೯,೦೩೫ ವಿಮಾ ಪಾಲಿಸಿಗಳು ಚಾಲ್ತಿಯಲ್ಲಿದ್ದವು ಎಂದು ತಿಳಿದು ಬರುವುದು.

## ಅಧ್ಯಾಯ ೧೨

### ಪಟ್ಟಣ ಪಂಚಾಯಿತಿ, ಜೇವರ್ಗಿ

ತಾಲೂಕು ಕೇಂದ್ರವಾದ ಜೇವರ್ಗಿಗೆ ಪ್ರಥಮ ಬಾರಿಗೆ ೧೯೭೪ ರಲ್ಲಿ ೧೫ ಮಂದಿ ಚುನಾಯಿತ ಸದಸ್ಯರಿಂದ ಕೂಡಿದ ಪುರಸಭೆಯನ್ನು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ ೧೯೬೪ರ ಅನ್ವಯ ರಚಿಸಲಾಯಿತು. ಜಿಲ್ಲಾ ಪರಿಷತ್ ಕಾಯ್ದೆ ೧೯೮೩ರ ಅನ್ವಯ ೧೯೮೭ ಜನವರಿಯಿಂದ ಮಧ್ಯಂತರ ಮಂಡಳ ಪಂಚಾಯ್ತಿ ಎಂದು ಪರಿಗಣಿಸಲಾದ ಈ ಪುರಸಭೆಯನ್ನು ೧೯೯೬ರಲ್ಲಿ ಪಟ್ಟಣ ಪಂಚಾಯ್ತಿಯಾಗಿ ಪರಿವರ್ತಿಸಲಾಯಿತು. ಈಗಿನ ಪಟ್ಟಣ ಪಂಚಾಯ್ತಿಗೆ ಮೊದಲ ಚುನಾವಣೆಗಳು ೧೯೯೬ರ ಜೂನ್‌ದಲ್ಲಿ ನಡೆದು ಎರಡು ಮೀಸಲು ಸ್ಥಾನಗಳಿಂದ ಕೂಡಿರುವ ಒಟ್ಟು ೧೨ ಚುನಾಯಿತ ಸದಸ್ಯರ ಸಮಿತಿಯನ್ನು ರಚಿಸಲಾಯಿತು. ಜೇವರ್ಗಿ ಪಟ್ಟಣದ ಜನಸಂಖ್ಯೆ ೧೯೯೧ರ ಜನಗಣತಿ ಅನ್ವಯ ೧೦,೮೭೭ ಆಗಿತ್ತು.

ಜೇವರ್ಗಿ ಪಟ್ಟಣ ಪಂಚಾಯ್ತಿಯ ಕಾರ್ಯವ್ಯಾಪ್ತಿ ೧೯೯೬-೯೭ರಲ್ಲಿದ್ದಂತೆ ೩೩೫೪.೧೭ ಚ. ಮೀಟರ್ ಆಗಿದ್ದು, ಈ ಸರಹದ್ದಿನಲ್ಲಿರುವ ಒಟ್ಟು ಮನೆಗಳ ಸಂಖ್ಯೆ ಸುಮಾರು ೫೦೦೦ ಆಗಿತ್ತು. ನಗರದ ಬೆಳವಣಿಗೆಯನ್ನು ವ್ಯವಸ್ಥಿತವಾಗಿ ರೂಪಿಸುವ ಉದ್ದೇಶದಿಂದ ಮೊದಲ ಬಾರಿಗೆ ೧೯೮೧-೮೨ರಲ್ಲಿ ನಗರ ಯೋಜನೆಯನ್ನು ಸಿದ್ಧಪಡಿಸಿ ವಿದ್ಯಾನಗರ, ಖ್ವಾಜಾ ಕಾಲೋನಿ, ಶಾಂತಿನಗರ, ಚರ್ಚ್ ಕಾಲೋನಿ ಹಾಗೂ ಬಸವೇಶ್ವರ ಬಡಾವಣೆಗಳನ್ನು ನಿರ್ಮಿಸಲಾಗಿದೆ. ಈ ಬಡಾವಣೆಗಳಲ್ಲಿ ಸುಮಾರು ೯೬೦ ಮನೆಗಳಿದ್ದು ಜನಸಂಖ್ಯೆ ಸುಮಾರು ೭,೨೦೦ ಆಗಿತ್ತು. ಹುಡ್ಕೊ ಸಂಸ್ಥೆಯು ಸಹ ಏಳು ಎಕರೆ ಪ್ರದೇಶದಲ್ಲಿ ೩೦೨ ಮನೆಗಳನ್ನು ಕಟ್ಟಿಸಿ ಸಾರ್ವಜನಿಕರಿಗೆ ಹಂಚಿದ್ದು ಈ ಪ್ರದೇಶದ ಒಟ್ಟು ಜನಸಂಖ್ಯೆ ಸುಮಾರು ೨೦೦೦ ಆಗಿತ್ತು.

ಪಟ್ಟಣಕ್ಕೆ ಸದ್ಯ ಕೊಳವೆಬಾವಿ ಹಾಗೂ ಸೇದುವ ಬಾವಿಗಳಿಂದ ಕುಡಿಯುವ ನೀರಿನ ಸರಬರಾಜು ಮಾಡಲಾಗುತ್ತಿದೆ. ನಗರದಲ್ಲಿ ೬೦೦ ಖಾಸಗಿ ಹಾಗೂ ೬೦ ಸಾರ್ವಜನಿಕ ಸ್ಥಳಗಳಿದ್ದು, ದಿನನಿತ್ಯ ಒಂದು ಲಕ್ಷ ಗ್ಯಾಲನ್ ನೀರು ಬಳಕೆಯಾಗುತ್ತಿದ್ದು, ತಲಾವಾರು ಹಂಚಿಕೆ ಸುಮಾರು ೩೦ ಲೀಟರ್ ಎಂದು ತಿಳಿದು ಬಂದಿದೆ. ಪಟ್ಟಣಕ್ಕೆ ವಿದ್ಯುತ್ ದೀಪಗಳ ಸೌಕರ್ಯವನ್ನು ಮೊದಲು ಬಾರಿಗೆ ೧೯೬೪ರಲ್ಲಿ ಕಲ್ಪಿಸಲಾಯಿತು. ೧೯೯೭ರಲ್ಲಿದ್ದ ಮನೆ ದೀಪಗಳು, ಬೀದಿದೀಪಗಳು ಮತ್ತು ಕೈಗಾರಿಕಾ ಘಟಕಗಳ ದೀಪಗಳ ಸಂಖ್ಯೆ ಕ್ರಮವಾಗಿ ೧೫೦೦, ೫೦೦ ಮತ್ತು ೪೦ ಎಂದು ವರದಿಯಾಗಿದೆ.

ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು ಐದು ಕಿ. ಮಿ. ಡಾಂಬರ್ ರಸ್ತೆ ಹಾಗೂ ೧೫ ಕಿ. ಮಿ. ಮೆಟಲ್ ರಸ್ತೆ ಇರುವುದು. ಜೇವರ್ಗಿ ಪಟ್ಟಣದಲ್ಲಿ ಸುಮಾರು ೩೦೦೦ ಜನ ವಸತಿ ಇರುವ ಎರಡು ಕೊಳಚೆ ಪ್ರದೇಶಗಳಿವೆ. ಪಟ್ಟಣ ಪಂಚಾಯ್ತಿ ಸರ್ಕಾರದಿಂದ ೧೯೯೪-೯೫, ೧೯೯೫-೯೬ ಹಾಗೂ ೧೯೯೬-೯೭ರಲ್ಲಿ ಕ್ರಮವಾಗಿ ರೂ. ೩೭,೧೬೫, ರೂ. ೪೯,೩೬೨ ಮತ್ತು ರೂ. ೧೧,೭೯,೨೮೯ ಜಕಾತಿ ಅನುದಾನ ಪಡೆದಿರುವುದು. ೧೯೯೪-೯೫ರಲ್ಲಿ ಪಂಚಾಯ್ತಿಯು ವಿವಿಧ ಬಾಬ್ತಿನಲ್ಲಿ ಮಾಡಿರುವ ಖರ್ಚಿನ ವಿವರ ಈ ಮುಂದಿನಂತಿರುವುದು. ಜನಾರೋಗ್ಯ ಮತ್ತು ನೈರ್ಮಲ್ಯ ರೂ. ೧೧,೪೯, ಜವಾಹರ್ ರೋಜಗಾರ ಯೋಜನೆಯಡಿಯಲ್ಲಿ ರೂ. ೧,೬೮,೫೭೦, ನೀರು ಸರಬರಾಜು ರೂ. ೬೬,೮೦೦, ರಸ್ತೆ ದೀಪಗಳ ನಿರ್ವಹಣೆ ರೂ. ೫೬,೨೦೩, ಸಿಬ್ಬಂದಿ ಪ್ರಭಾರ ರೂ. ೫೩,೬೮೦ ಹಾಗೂ ಇತರೆ ರೂ. ೪೮,೯೫೦.

ಪಟ್ಟಣದ ನೈರ್ಮಲ್ಯ ಕಾಪಾಡಲು ಒಬ್ಬ ನೈರ್ಮಲ್ಯ ನಿರೀಕ್ಷರ ಅಧೀನದಲ್ಲಿ ೧೩ ಮಂದಿ ಪೌರ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿರುವರು.

**ಅಧ್ಯಾಯ-೧೩**

**ಶಿಕ್ಷಣ ಮತ್ತು ಕ್ರೀಡೆ**

ಜಿಲ್ಲೆಯಲ್ಲಿ ಅಕ್ಷಯ ವಿದ್ಯಾವಿಕಾಸ ಯೋಜನೆಯಡಿ ಉಚಿತ ಪಠ್ಯ ಪುಸ್ತಕ ವಿತರಣಾ ವರದಿ ಹೀಗಿದೆ. ೧೯೯೦-೯೧, ೧,೮೪,೩೦೩ ಪುಸ್ತಕಗಳು. ಇದಕ್ಕೆ ರೂ. ೭೨೭೫೦೮ ಒಟ್ಟು ಮೊತ್ತ ವೆಚ್ಚವಾಗಿರುತ್ತದೆ.

೧೯೯೭-೯೮ನೇ ಸಾಲಿಗೆ ರೂ. ೪೯,೦೪,೯೮೭ ಮೊತ್ತದ ೭,೭೭,೯೪೭ ಪುಸ್ತಕಗಳು ವಿತರಣೆಯಾಗಿವೆ.

ವಿದ್ಯಾ ವಿಕಾಸ ಯೋಜನೆಯಡಿ ೧೯೯೩-೯೪ನೆಯ ಸಾಲಿಗೆ ೨,೪೩,೬೩೨ ಸಮವಸ್ತ್ರಗಳನ್ನು ೯೬-೯೭ನೆಯ ಸಾಲಿಗೆ ೨,೦೩,೧೮೨ ಸಮವಸ್ತ್ರಗಳನ್ನು ವಿತರಿಸಲಾಗಿದೆ.

ಮಧ್ಯಾಹ್ನ ಉಪಹಾರ ಯೋಜನೆ ಜಿಲ್ಲೆಯಲ್ಲಿ ೧೯೬೩ರಲ್ಲಿ ಪ್ರಾರಂಭವಾಗಿ, ೧೯೯೧-೯೨ನೆಯ ಸಾಲಿಗೆ ೫೦,೫೯೫ ಮತ್ತು ೯೭-೯೮ನೆಯ ಸಾಲಿಗೆ ೩,೯೧,೫೫೦ ಫಲಾನುಭವಿಗಳು ಇದರ ಉಪಯೋಗ ಪಡೆದಿದ್ದರು.

ಯಾದಗಿರಿ ತಾಲೂಕಿನಲ್ಲಿ ೧೯೯೫-೯೬ನೆಯ ಸಾಲಿಗೆ ಒಟ್ಟು ೩೩ ಪೂರ್ವ ಪ್ರಾಥಮಿಕ ಶಾಲೆಗಳಿದ್ದು, ಇವುಗಳಲ್ಲಿ ಒಟ್ಟು ೧೦೫೬ ಮಕ್ಕಳು ಹಾಗೂ ೨೮ ಬೋಧಕ ಸಿಬ್ಬಂದಿಗಳು ಇದ್ದರು. ಇದೇ ವರ್ಷಕ್ಕೆ ತಾಲೂಕಿನಲ್ಲಿ ಒಟ್ಟು ೨೦೩ ಪ್ರಾಥಮಿಕ ಶಾಲೆಗಳಿದ್ದು ೬೩೬ ಮಂದಿ ಸಿಬ್ಬಂದಿ ಇದ್ದರು. ಈ ಶಾಲೆಗಳ ಒಟ್ಟು ಮಕ್ಕಳ ಸಂಖ್ಯೆ ೪೦,೩೭೧ ಆಗಿದ್ದು ಇದರಲ್ಲಿ ೨೧,೧೭೫ ಗಂಡು, ೧೯,೧೯೬ ಹೆಣ್ಣು ಮಕ್ಕಳಿದ್ದರು. ತಾಲೂಕಿನಲ್ಲಿ ಇದೇ ಸಾಲಿಗೆ ಒಟ್ಟು ೧೯ ಪ್ರೌಢ ಶಾಲೆಗಳಿದ್ದು, ಅವುಗಳಲ್ಲಿ ಒಟ್ಟು ೨,೪೬೮ ಮಕ್ಕಳು ಹಾಗೂ ೧೫೪ ಬೋಧಕ ಸಿಬ್ಬಂದಿಗಳು ಇದ್ದರು.

೧೯೯೫-೯೬ನೆಯ ಸಾಲಿಗೆ ತಾಲೂಕಿನಲ್ಲಿ ೩೨,೦೬೦ ಉಚಿತ ಸಮವಸ್ತ್ರ, ೩೨,೦೬೦ ಉಚಿತ ಪಠ್ಯ ಹಾಗೂ ೨೯,೨೮೭ ಮಧ್ಯಾಹ್ನ ಭೋಜನ ಫಲಾನುಭವಿಗಳಿದ್ದರು.

**ಅಧ್ಯಾಯ-೧೭**

**ಪ್ರೇಕ್ಷಣೀಯ ಸ್ಥಳಗಳು**

**ಪುಟ ೭೪೦ಕ್ಕೆ ಸೇರಿಸಿ**

**ನೀಲೂರು** (೩೨೪೫) ತಾಲೂಕು ಕೇಂದ್ರವಾದ ಅಫಜಲಪುರದಿಂದ ಪೂರ್ವಕ್ಕೆ ೪೦ ಕಿ. ಮೀ., ಗುಲಬರ್ಗಾದಿಂದ ಪಶ್ಚಿಮಕ್ಕೆ ೨೭ ಕಿ. ಮೀ., ಸ್ಟೇಷನ್ ಗಾಣಗಾಪುರದಿಂದ ಪೂರ್ವಕ್ಕೆ ಐದು ಕಿ. ಮೀ. ದೂರದಲ್ಲಿರುವ ಇದು, ಅಲ್ಲಿರುವ ಮೆಹಬೂಬ್ ಸುಬಾನಿಯ ದರ್ಗಾದಿಂದಾಗಿ ಪ್ರಸಿದ್ಧವಾಗಿದೆ. ಇದರ ಉರುಸು ವರುಷದಲ್ಲಿ ಎರಡು ಬಾರಿ (ಹಿರಿಜಾತ್ರೆ ಮಾರ್ಚ್-ಏಪ್ರಿಲ್‌ನಲ್ಲೂ, ಚಿಕ್ಕ ಜಾತ್ರೆ ಅಕ್ಟೋಬರ್-ನವೆಂಬರ್‌ನಲ್ಲೂ) ಜರುಗುತ್ತದೆ. ಊರಿಂದ ಒಂದು ಕಿ. ಮೀ. ಅಂತರದಲ್ಲಿರುವ ಗುಡ್ಡದ ಮೇಲೆ ಪ್ರಶಾಂತ ವಾತಾವರಣದ ನಡುವೆ ಇರುವ ಶಿವಶರಣೆ ನಿಂಬ್ಯಕ್ಕಳ ಗುಡಿಯು ಗಮನಾರ್ಹವಾಗಿದ್ದು, ಇದರ ಜಾತ್ರೆಯನ್ನು ಉಗಾದಿ ಪಂಚಮಿಯಂದು ಆಚರಿಸಲಾಗುತ್ತದೆ.

**ಪುಟ ೭೭೪ಕ್ಕೆ ಸೇರಿಸಿ**

**ಬೀರನೂರು**(೧೪೩೧) ತಾಲೂಕು ಕೇಂದ್ರವಾದ ಶಹಾಪುರದಿಂದ ಆಗ್ನೇಯಕ್ಕೆ ೨೧ ಕಿ. ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಇಲ್ಲಿಂದ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ವರದಿಯಾಗಿದ್ದು, ಊರು ಬೂದಿ ದಿಬ್ಬದ ಮೇಲೆ ಇದೆ. ಊರಲ್ಲಿಂದು ಸುಮಾರು ೧೨-೧೩ನೆಯ ಶತಮಾನಕ್ಕೆ ಸೇರಿದ ರಾಮಲಿಂಗೇಶ್ವರ ದೇವಾಲಯವಿದೆ. ಮೂಲತಃ ತ್ರಿಕೂಟವಾಗಿದ್ದ ಇದು, ಇಂದು ಪೂರ್ಣ ಶಿಥಿಲಗೊಂಡಿದ್ದು, ಗರ್ಭಗೃಹವಷ್ಟೇ ಉಳಿದಿದೆ. ಅಲ್ಲೇ ಭೈರವ

ಹಾಗೂ ವಿಷ್ಣುವಿನ ಮುಕ್ಕಾದ ಶಿಲ್ಪಗಳಿವೆ. ಗುಡಿ ಹೊಲದಲ್ಲಿರುವ ಪರಮಾನಂದನ ಗುಡಿಯು ಪ್ರಾಚೀನದ್ದಾಗಿದ್ದು, ಗರ್ಭಗೃಹವಷ್ಟೇ ಇಂದು ಸುಸ್ಥಿತಿಯಲ್ಲಿದೆ. ಹನುಮಂತನ ಗುಡಿಯಲ್ಲಿ ವಿಷ್ಣು, ಸಪ್ತಮಾತೃಕಾ ಹಾಗೂ ನಾಗಶಿಲ್ಪಗಳಿದ್ದು, ತೀರ್ಥಂಕರ ಪೀಠವೂ ಇದೆ. ಇವುಗಳ ಜೊತೆಗೆ ಊರಲ್ಲಿ ನಾಲ್ಕಾರು ವೀರಗಲ್ಲುಗಳಿದ್ದು, ಅವುಗಳಲ್ಲಿ ಅಖಂಡೇಶ್ವರ ಗುಡಿಯಲ್ಲಿರುವ ಇಬ್ಬರು ಬಿಲ್ಲಾಳುಗಳಿರುವ ವೀರಗಲ್ಲು ಗಮನಾರ್ಹವಾಗಿದೆ.

**ಭಂಕೂರು : ಪುಟ ೭೪೬ ಕ್ಕೆ ಸೇರಿಸಿ**

ಅಬ್ಬಲೂರಿನಲ್ಲಿ (ಹಿರೇಕೆರೂರು ತಾಲೂಕು) 'ಶಿರಸ್ಸು ಪವಾಡ' ಮೆರೆದ ಶರಣ ಆಳಂದದ ಏಕಾಂತದ ರಾಮಯ್ಯನ ರುಂಡವನ್ನು ಭಂಕೂರಿಗೂ ತಂದಿದ್ದ ಅಂಶವನ್ನು ತಾಳಿಕೋಟೆಯ ೧೧೮೪ರ ಶಾಸನ ಹಾಗೂ 'ಅಬ್ಬಲೂರು ಚರಿತೆ'ಗಳು ದಾಖಲಿಸಿವೆ.

**ಮರತೂರು : ಪುಟ ೭೫೦ಕ್ಕೆ ಸೇರಿಸಿ**

ವಿಜ್ಞಾನೇಶ್ವರರು ಇಲ್ಲಿಯವರೆಂಬ ಅಭಿಪ್ರಾಯವಿದೆ. ಆದರೆ ವಿಜ್ಞಾನೇಶ್ವರರು ಅಟ್ಟಳ ನಾಡಿನಲ್ಲಿದ್ದ 'ಮಾಸೆಯ ಮಡು' ಗ್ರಾಮದವರಾಗಿದ್ದು, ಕಲ್ಯಾಣದ ಬಳಿಯ 'ಮಾಸೆಯಮಡು' ಇವರ ಹುಟ್ಟೂರೆಂದು ಪಿ. ಬಿ. ದೇಸಾಯಿ ಈಗಾಗಲೇ ಗುರುತಿಸಿದ್ದಾರೆ.

**ಮುನೇರ ಬೊಮ್ಮನಹಳ್ಳಿ : ಪುಟ ೭೬೪ಕ್ಕೆ ಸೇರಿಸಿ**

ಇವುಗಳಲ್ಲಿ ಸ್ಥಾನಕ ಭಂಗಿಯ ಪಾರ್ಶ್ವನಾಥ ಮತ್ತು ಪದ್ಮಾಸೀನ ಮಹಾವೀರ ತೀರ್ಥಂಕರರ ಶಿಲ್ಪಗಳು ಮಹತ್ವದಾಗಿದ್ದು, ಇವು ಸುಮಾರು ೧೦ನೆಯ ಶತಮಾನದ ರಚನೆಗಳಾಗಿವೆ. ಅಲ್ಲೇ ಇರುವ ಮೂರು ವೀರಗಲ್ಲುಗಳು ಮೂರು ಹಂತದಲ್ಲಿ ಉಬ್ಬು ಕೆತ್ತನೆಗಳನ್ನು ಹೊಂದಿದ್ದು, ತುರುಗೋಳವನ್ನು ಪ್ರತಿನಿಧಿಸುತ್ತವೆ. ಊರ ಪೂರ್ವಕ್ಕೆ ಕಲ್ಯಾಣದ ಚಾಳುಕ್ಯರ ಕಾಲದ ತ್ರಿಕೂಟ ದೇವಾಲಯವಿದ್ದು, ಇಂದು ಸಂಪೂರ್ಣ ಜೀರ್ಣೋದ್ಧಾರಗೊಂಡಿದ್ದು ನವರಂಗದ ಛತ್ತು ಆಕರ್ಷಕವಾಗಿದೆ. ಊರಿನ ಪಶ್ಚಿಮಕ್ಕೆ ಸುಮಾರು ಎರಡು ಕಿ. ಮೀ. ದೂರದಲ್ಲಿರುವ ಕರಿಕಲ್ಲು ಗುಡ್ಡೆಯು ದೇಗುಲವೊಂದನ್ನು ತನ್ನಲ್ಲಿ ಅಡಗಿಸಿಕೊಂಡಿರುವಂತೆ ತೋರುತ್ತದೆ. ಹಿಂದೆ ಈ ಊರು ಪ್ರಮುಖ ಜೈನ ಕೇಂದ್ರವಾಗಿದ್ದ ಅಂಶವನ್ನು ಇಲ್ಲಿಯ ಶಿಲ್ಪಾವಶೇಷಗಳು ಸ್ಥಿರಪಡಿಸುತ್ತವೆ.

**ಯಕ್ತಾಪುರ : ಪುಟ ೭೬೪ಕ್ಕೆ ಸೇರಿಸಿ**

ಗುತ್ತಿ ಬಸವೇಶ್ವರ ದೇವಸ್ಥಾನದಲ್ಲಿ ಕೆಲವು ಕಡೆ ಸುಂದರವಾದ ಮಿಥುನ ಶಿಲ್ಪಗಳಿದ್ದು, ಇಲ್ಲಿಂದ ಎರಡು ಕಿ. ಮೀ. ದೂರದಲ್ಲಿರುವ ವೀರಗಲ್ಲೊಂದನ್ನು ಸ್ಥಳಿಕರು ರಾಮ-ಸೀತೆಯರ ಕಲ್ಲು, ಬಾಲಗಲ್ಲು ಎಂದು ರೂಢಿಯಲ್ಲಿ ಕರೆಯುತ್ತಿದ್ದು, ಬಾಲಗಲ್ಲು, 'ಬಾಳ್ಗಚ್ಚು' ಪದದ ಅಪಭ್ರಂಶವಾಗಿರುವಂತೆ ತೋರುತ್ತದೆ.

**ಕಂದಾಯ ಗ್ರಾಮಗಳ ಪಟ್ಟಿ : ಪುಟ ೮೧೮ರಲ್ಲಿ ನಾಲ್ಕನೆಯದಾಗಿ ಸೇರಿಸಿ**

| | | | |
|---|---|---|---|
| ಬೇವಿನಾಳ ಕೆ. ಎಚ್. | ಸು | Bevinal K. H. | Su |